# ತುಮಕೂರು ವಿಶ್ವವಿದ್ಯಾನಿಲಯ

ಪರೀಕ್ಷಾ ಭವನ, ಬಿ.ಹೆಚ್.ರಸ್ತೆ, ತುಮಕೂರು-572 103, ☎ : 0816-2255650, 2273511ಫ್ಯಾಕ್ಸ್ : 0816-2270719


ಸಂಖ್ಯೆ: ತುವಿ: ಪ.ವಿ.: 2025-26: 577 ದಿನಾಂಕ:15.10.2025

## ದರಪಟ್ಟಿ ಆಹ್ವಾನ

ವಿಷಯ: 2025 ನೇ ಡಿಸೆಂಬರ್ ಮಾಹೆಯಲ್ಲಿ ನಡೆಯಲಿರುವ ಪರೀಕ್ಷೆಗಳಿಗೆ ಅವಶ್ಯವಿರುವ ವಿವಿಧ ಮಾದರಿಯ ಲೇಖನ ಸಾಮಗ್ರಿಗಳನ್ನು ಸರಬರಾಜು ಮಾಡಲು ದರಪಟ್ಟಿಯನ್ನು ಆಹ್ವಾನಿಸುತ್ತಿರುವ ಕುರಿತು.

ಉಲ್ಲೇಖ: ಮಾನ್ಯ ಕುಲಪತಿಯವರ ಅನುಮೋದನೆ ದಿನಾಂಕ:15.10.2025(ಕಂಡಿಕೆ-58)

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2025 ನೇ ಡಿಸೆಂಬರ್ ಮಾಹೆಯಲ್ಲಿ ನಡೆಯಲಿರುವ ಪರೀಕ್ಷೆಗಳಿಗೆ ಅವಶ್ಯವಿರುವ ವಿವಿಧ ಮಾದರಿಯ ಲೇಖನ ಸಾಮಗ್ರಿಗಳನ್ನು ಮುದ್ರಿಸಿ ಸರಬರಾಜು ಮಾಡಲು ಈ ಕೆಳಕಂಡಂತೆ ದರಪಟ್ಟಿಯನ್ನು ಆಹ್ವಾನಿಸಲಾಗಿದೆ. ತಲಾ ಒಂದಕ್ಕೆ ತಗಲುವ ದರವನ್ನು ನಮೂದಿಸುವುದು (ಎಲ್ಲಾ ತೆರಿಗೆಗಳು ಸೇರಿ)

### ಪರೀಕ್ಷಾ ಲೇಖನ ಸಾಮಗ್ರಿಗಳ ವಿವರ.

| Sl. No. | Description | Specification | Per piece (Including all Taxes) | (Approximate) Quantity | Total (Rs) |
|---|---|---|---|---|---|
| 1. | Practical Main Answer booklets (8 pages) | A4 (28.5 cm x 20.5cm) matric size paper, printing on both sides as per the format using 60 GSM Bhadravathi Paper Mill / West Coast Cream-Wove, side pinning and serial machine numbering as per sample. | 01 | 50000 | |
| 2. | Graph Sheets (A4 Size) | A4 Size, printing on one side as per the format with 70 GSM Bhadravathi Paper Mill / West Coast Cream-Wove paper, as per sample | 01 | 50000 | |
| 3. | Mark List Forms (Practical) (A4 Size) | A4 Size, printing on one side as per the format with 60 GSM Bhadravathi Paper Mill / West Coast Cream-Wove paper, as per sample | 01 | 10000 | |
| 4. | Practical Marks List Cover (9"x 4") | Brown paper Covers made out of 90 GSM craft paper with single side printing as per samples. | 01 | 10000 | |
| 5. | Practical Examination Brown Covers( 15" x 11") | Brown paper Covers made out of 90 GSM craft paper with single side printing as per samples. | 01 | 10000 | |
| 6. | Marks List for Viva-Voce/ Dissertation/ Project Valuation (P.G.) | A4 Size, printing on one side as per the format with 60 GSM Bhadravathi Paper Mill / West Coast Cream-Wove paper, as per sample | 01 | 10000 | |

(ಪು.ತಿ.ನೋ)

ಷರತ್ತುಗಳು:

1. ಮುಚ್ಚಿದ ಲಕೋಟೆಯ ಮೇಲೆ "ಲೇಖನ ಸಾಮಗ್ರಿಗಳನ್ನು ಸರಬರಾಜು ಮಾಡಲು ದರಪಟ್ಟಿ" ಎಂದು ಸ್ಪಷ್ಟವಾಗಿ ನಮೂದಿಸಬೇಕು.
2. ದರಪಟ್ಟಿಯನ್ನು ಸಲ್ಲಿಸುವ ಮುಂಚೆ ಲೇಖನ ಸಾಮಗ್ರಿಗಳ ಮಾದರಿಯನ್ನು ವಿಶ್ವವಿದ್ಯಾನಿಲಯದ ಪರೀಕ್ಷಾಂಗ ವಿಭಾಗದಲ್ಲಿ ಖುದ್ದಾಗಿ ಪರಿಶೀಲಿಸತಕ್ಕದ್ದು.
3. ದರಪಟ್ಟಿಯನ್ನು ಸಲ್ಲಿಸಲು ಕೊನೆಯ **ದಿನಾಂಕ:28.10.2025** ರ **ಅಪರಾಹ್ನ 04.00** ಗಂಟೆಯವರೆಗೆ
4. ದರಪಟ್ಟಿಯನ್ನು **ಕುಲಸಚಿವರು (ಪರೀಕ್ಷಾಂಗ), ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು** ಇವರಿಗೆ ಮುದ್ದಾಂ ಅಥವಾ ಅಂಚೆಯ ಮೂಲಕ ತಲುಪಿಸತಕ್ಕದ್ದು. ಅಂಚೆಯ ವಿಳಂಬಕ್ಕೆ ವಿಶ್ವವಿದ್ಯಾನಿಲಯವು ಜವಾಬ್ದಾರರಾಗುವುದಿಲ್ಲ.
5. ತಲಾ ಒಂದಕ್ಕೆ ತಗಲುವ ದರವನ್ನು ನಮೂದಿಸುವುದು (ಎಲ್ಲಾ ತೆರಿಗೆಗಳು ಸೇರಿ) ಹಾಗೂ ಒಟ್ಟಾರೆ ಎಲ್ಲಾ ಲೇಖನ ಸಾಮಗ್ರಿಗಳಿಗೆ ನಮೂದಿಸಿದ ದರದಲ್ಲಿ ಅತೀ ಕಡಿಮೆ ದರವನ್ನು ನಮೂದಿಸಿದ ಸಂಸ್ಥೆಯನ್ನು ಎಲ್–1 ಎಂದು ಪರಿಗಣಿಸಿ ಸರಬರಾಜು ಆದೇಶ ನೀಡಲಾಗುವುದು.
6. ಸರಬರಾಜು ಸಂಸ್ಥೆಯವರು ತಮ್ಮ ಸಂಸ್ಥೆಯ GSTIN No & PAN No. ದಾಖಲೆಗಳನ್ನು ದರಪಟ್ಟಿಯ ಜೊತೆಗೆ ಲಗತ್ತಿಸಬೇಕು.
7. ದರಪಟ್ಟಿಗಳನ್ನು ಯಾವುದೇ ಕಾರಣ ನೀಡದೆ ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ವಿಶ್ವವಿದ್ಯಾನಿಲಯ ಕಾಯ್ದಿರಿಸಿಕೊಂಡಿದೆ.
8. ಲೇಖನ ಸಾಮಗ್ರಿಗಳ ಸರಬರಾಜು ವೆಚ್ಚವನ್ನು ಸರಬರಾಜುದಾರರೇ ಭರಿಸಬೇಕು.
9. ದರಪಟ್ಟಿಯಲ್ಲಿ ನಮೂದಿಸಿರುವ ಲೇಖನ ಸಾಮಗ್ರಿಗಳ ಪ್ರಮಾಣವನ್ನು ಹೆಚ್ಚಿಸುವ ಅಥವಾ ಕಡಿಮೆಗೊಳಿಸುವ ಹಕ್ಕನ್ನು ವಿಶ್ವವಿದ್ಯಾನಿಲಯವು ಕಾಯ್ದಿರಿಸಿಕೊಂಡಿದೆ.
10. ಷರತ್ತು ಬದ್ಧ ದರಪಟ್ಟಿಗಳನ್ನು ಪರಿಗಣಿಸಲಾಗುವುದಿಲ್ಲ ಮತ್ತು ಪ್ರತಿ ಸಂಸ್ಥೆಯವರು ಏಕೈಕ ದರಪಟ್ಟಿಯನ್ನು ಮಾತ್ರ ಸಲ್ಲಿಸುವುದು.
11. ಆದೇಶ ನೀಡಿದ **ಒಂದು ವಾರದೊಳಗಾಗಿ** ಸಾಮಗ್ರಿಗಳನ್ನು ಸರಬರಾಜು ಮಾಡಬೇಕು ಮತ್ತು ಸರಬರಾಜು ಆದೇಶದಲ್ಲಿ ನೀಡುವ ಎಲ್ಲಾ ಷರತ್ತುಗಳನ್ನು ಪಾಲಿಸಬೇಕು.

**ಆದೇಶದ ಮೇರೆಗೆ**

6/10/25

**ಕುಲಸಚಿವರು(ಪರೀಕ್ಷಾಂಗ)**

ಕುಲಸಚಿವರು (ಮೌಲ್ಯಮಾಪನ)
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

ಪ್ರತಿಗಳು:

1. ಮಾನ್ಯ ಕುಲಪತಿಯವರ ಆಪ್ತ ಕಾರ್ಯದರ್ಶಿಗಳು/ ಮಾನ್ಯ ಕುಲಸಚಿವರ ಆಪ್ತ ಸಹಾಯಕರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಹಣಕಾಸು ಅಧಿಕಾರಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
3. ಸಿಸ್ಟಮ್ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು (ಇಂದೇ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು)
4. ಕಚೇರಿ ಪ್ರತಿ.